"ಬೊಂಬಾಯಿ ಅಮ್ಮಿಣಿಕುಟ್ಟಿ ಮನೆಗಾ!" ಅಂದುಬಿಟ್ಟ. ಎರಡು ದಿನದ ಹಿಂದೆ ಮೂಸಾಕುಞಿ ಹೇಳಿದ್ದು ನೆನಪಾಗಿಯೇ ಅವನು ಹಾಗೆ ಹೇಳಿದ್ದು.

"ನಿನ್ನ ಆ ಫಕೀರಿಚ್ಚನಿಗೆ ಮಂಡೆಸಮ ಇಲ್ಲವೊ ಅಲ್ಲ ಪಿತ್ತ ನೆತ್ತಿಗೆ ಅಡರಿದ್ದೊ ಗೊತ್ತಾಗುದಿಲ್ಲ ಸುರೇಶ. ಹೋಗಿ ಹೋಗಿ ಆ ಬೊಂಬಾಯಿ ಅಮ್ಮಿಣಿಕುಟ್ಟಿ ಮನೆಯ ಮಾಡು ರಿಪೇರಿ ಮಾಡಿಸಿಕೊಡ್ಲಿಕ್ಕೆ ಹೊರಟಿದ್ದಾರೆ ಇವರು. ಸೀಮೆಯಲ್ಲಿಲ್ಲದ ಝಕಾತ್ ಇವರದ್ದು. ನಿಯತ್ತಿನಲ್ಲಿ ಪಾಸ ಹಿಡಿಲಿಕ್ಕೆ ತಾಕತ್ತಿಲ್ಲ. ನಾಲ್ಕು ಜನ ನಡೆಯುವ ದಿಕ್ಕಿನಲ್ಲಿ ನಡೀರಿ ಅಂತ ಹೇಳ್ಲಿಕ್ಕೆ ಹೋದ್ರೆ ನಮ್ಮ ಬಾಯಿ ಕಟ್ಟುವ ಹಾಗೆ ಮಾತಾಡಿ ಬಾಯಿ ಮುಚ್ಚಿಸುವ ಬುದ್ಧಿವಂತಿಕೆಗೆಂತ ಕಮ್ಮಿ ಇಲ್ಲ" ಅನ್ನುತ್ತ ಕ್ಯಾಕರಿಸಿದ್ದ. ಫಕೀರಿಚ್ಚ ಹಾರ್ಡ್‌ವೇರ್ ಅಂಗಡಿಯಿಂದ ಮಾಡು ರಿಪೇರಿಗೆ ಬೇಕಾದ ಸಾಮಾನುಗಳನ್ನು ಹಾಕಿ ಕಳುಹಿಸಲು ಟೆಂಪೊ ಬಾಡಿಗೆಗೆ ಗೊತ್ತು ಮಾಡುತ್ತಿದ್ದಾಗ ಮೂಸಾ ಆ ಟೆಂಪೋ ಡ್ರೈವರನೊಂದಿಗೆ ಪಟ್ಟಾಂಗ ಹಾಕುತ್ತಿದ್ದ. ಹಾಗಾಗಿ ಸಮಾಚಾರ ವಿವರವಾಗಿಯೇ ಮೂಸಾನಿಗೆ ಸಿಕ್ಕಿತ್ತು. ಆತ ಅದನ್ನು ಹಾಗೆಯೇ ಸುರೇಶನ ಕಿವಿಗೆ ಹಾಕುವಾಗ ಫಕೀರಿಚ್ಚನ ಮೇಲಿನ ಕೋಪವನ್ನು ಕ್ಯಾಕರಿಸುವುದರಲ್ಲಿ ತೋರಿಸಿಕೊಂಡಿದ್ದ.

'ಅಮ್ಮಿಣಿಕುಟ್ಟಿ ಬೊಂಬಾಯಿಯಲ್ಲಿ ವಯಿವಾಟು ಮಾಡುತ್ತಿದ್ದಳಂತೆ. ಅವಳಿಗೆ ಏಡ್ಸ್ ಉಂಟಂತೆ' ಅನ್ನುವುದು ಈಗ ಗುಟ್ಟಿನ ವಿಚಾರವಾಗಿ ಉಳಿದಿರಲಿಲ್ಲ. ಅವಳು ಮುಂಬಯಿ ಬಿಟ್ಟು ಬರುವಾಗ ಅವಳೊಂದಿಗೆ ಬುದ್ಧಿಮಾಂದ್ಯ ಹುಡುಗನೊಬ್ಬನಿದ್ದ. ಆತ ತನ್ನ ಮಗನೆಂದು ಅವಳೇ ಹೇಳಿದ್ದಳು. ಮರ್ಯಾದಸ್ಥರ್‍ಯಾರೂ ಅವಳ ಮನೆ ಕಡೆ ಸುಳಿಯುವುದಿಲ್ಲ. ಅವಳ ಸಂಬಂಧಿಕರೂ ಅವಳನ್ನು ಹತ್ತಿರ ಸೇರಿಸುವುದಿಲ್ಲ. ಅವಳ ಬಗ್ಗೆ ಎಲ್ಲಾ ಗೊತ್ತಿದ್ದೂ ಈ ಫಕೀರಿಚ್ಚ ಅಲ್ಲಿಗೆ ಹೋಗುವುದಾ? ಇವರಿಗೆ ದಾನಧರ್ಮ ಮಾಡ್ಲಿಕ್ಕೆ ಒಳ್ಳೆಯವರ್‍ಯಾರು ಸಿಗಲಿಲ್ವಾ! ಜನ ಏನಂತ ತಿಳಿದಾರು? ಈಗ ಅಕ್ಕಿ ಕೊಂಡು ಹೋಗಿ ಕೊಡುವುದು ಬೇರೆ ಉಂಟಂತೆ ಅಂದುಕೊಂಡ ಸುರೇಶ. ಮಾಡುತ್ತಿದ್ದ ಕೆಲಸ ಬಿಟ್ಟು ಅವನ ಮುಖವನ್ನೇ ನಿರುಕಿಸಿದ ಫಕೀರಿಚ್ಚ,

"ಓ!... ಅಮ್ಮಿಣಿಕುಟ್ಟಿಯ ಮನೆ ಮಾಡು ರಿಪೇರಿ ಬಗ್ಗೆ ನಿಂಗೆ ಮೂಸಾ ಆಗ್ಲೆ ಹೇಳಿದಾನೆ. ನಾನು ಟೆಂಪೋ ಬಾಡಿಗೆ ಮಾತಾಡುವಾಗ ಅವನೂ ಅಲ್ಲೇ ಇದ್ದ" ಅಂದ.

"ಈ ನೆಬಿಸುಮ್ಮ ಬರಿ ಪಾಪದ ಜನ ಆಯ್ತು. ನನ್ನ ಹೆಂಡತಿ ಏನಾದ್ರು ಅತ್ತ ನನ್ನ ನೆರಳು ಆಂಜಿದ್ರೂ ಕೊಂದು ಹಾಕಿಯಾಳು. ಅಲ್ಲಾ ನೆಬಿಸುಮ್ಮ, ಆ ಅಮ್ಮಿಣಿಕುಟ್ಟಿ ಎಂತವಳು ಅಂತ ಗೊತ್ತಿಲ್ವಾ ನಿಮ್ಗೆ. ಅವಳು ಮಾಡಿದ ಕರ್ಮ, ಅವಳು ತಿಂತಾಳೆ" ಏನೋ ಒಂದು ಹೇಳಿ ಹೇಗಾದರೂ ತನ್ನ ಅಸಮಾಧಾನ ತೋರಿಸಬೇಕಿತ್ತು ಅವನಿಗೆ. ಅದಕ್ಕಾಗೇ ಹೇಳಿದ್ದ.

"ಸುರೇಶ, ದೊಡ್ಡ ದೊಡ್ಡ ಧರ್ಮಕರ್ಮದ ಮಾತು ಹೇಳುವುದು ಯಾವಾಗ ಗೊತ್ತುಂಟಾ? ಕಳೆದ ವರ್ಷ ಕಾಸರಗೋಡಿನಲ್ಲಿ ಶಾಲೆಗೆ ಹೋಗುತ್ತಿದ್ದ ಹನ್ನೆರಡು ವರ್ಷದ ಆ ಸೆಫಿಯಾಳನ್ನ ಗೋವಾಕ್ಕೆ ಮಾರಿದ ಸುಲೈಮಾನ್ ಮತ್ತೆ ಗಂಧದ ಮಾಫಿಯಾದ ಚಂದು ನಾಯರಿಗೆ ಜೀವಾವಧಿ ಜೈಲಾಯ್ತಲ್ಲ. ಅಂತದಕ್ಕೆ ಹೇಳು ಅವರವರ ಕರ್ಮ ಅನುಭವಿಸ್ತಿದ್ದಾರೆ ಅಂತ. ಆಗ ಒಡೆಯಕ್ಕಾರ ಕೂಡಾ ಹೌದೌದು ಅಂತ ತಲೆ ಆಡಿಸಿಯಾನು. ಆ ಹುಡುಗಿಯನ್ನು ಗ್ರಹಿಸಿದ್ರೆ ಈಗ್ಲೂ ಎದೆಯಲ್ಲಿ ಕಿಚ್ಚು ಹೊತ್ತಿದ ಹಾಗೆ ಆಗ್ತದೆ ನಂಗೆ. ಭೂಮಿಯನ್ನೂ, ಹೆಂಗಸನ್ನೂ, ಮಕ್ಕಳನ್ನೂ ಬರ್ಬಾದಿ ಮಾಡಿ ಹೊಟ್ಟೆಗೆ ತಿನ್ನುವ ಸೈತಾನಿಗಳು, ಮುದಿ ಪ್ರಾಯದಲ್ಲಿ ತಿನ್ನುವ ಚೋರಿನಲ್ಲಿ ಹುಳ ಬೀಳ್ತದೆ" ಮಾತಿನ ಕೊನೆಗೆ ಫಕೀರಿಚ್ಚನ ಧ್ವನಿ ಕಂಪಿಸಲಾರಂಭಿಸಿತ್ತು. ಫಕೀರಿಚ್ಚನೇನಾದರೂ ಮರ್ಮಕ್ಕೆ ನಾಟುವಂತೆ ಮಾತಾಡಿದರೆ, ಅವನ ತರ್ಕದ ಬಲೆಯಲ್ಲಿ